Code No. **08 X(D)**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು – ಪ್ರೌಢ ದರ್ಜೆ – ಪ್ರಥಮ ಪತ್ರಿಕೆ

ಜನವರಿ, 2019 ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ನಿನ್ನನ್ನು ನೀನು ಅರಿಯಲು ಅನೇಕ ಮಾರ್ಗಗಳಿವೆ. ಅವುಗಳಲ್ಲಿ ತುಂಬಾ ಸರಳವಾದ ಮತ್ತು ಸುಲಭವಾದ ಮಾರ್ಗ ಡೈರಿ ಓದುವುದು. ಡೈರಿ ಓದಲು, ಮೊದಲು ಬರೆಯಬೇಕು. ನಿನಗೆ ಅನಿಸಿದ್ದು, ನಿನ್ನ ಪ್ರಜ್ಞೆಗೆ ಹೊಳೆದದ್ದನ್ನೆಲ್ಲಾ ಬರೆಯುವ ಶಿಸ್ತನ್ನು ರೂಢಿಸಿಕೊಳ್ಳಬೇಕು ಎಂದು ನನ್ನ ಮಗನಿಗೆ ಹೇಳುತ್ತಿದ್ದೆ. ಪ್ರತಿಕ್ಷಣ ನಮ್ಮ ಮನಸ್ಸಿಗೆ ಬಂದ ಆಲೋಚನೆಗಳು ಸ್ಮರಣೆಯಲ್ಲಿ ನಮ್ಮ ನಿರೀಕ್ಷೆಗಳ ಸಫಲತೆಯನ್ನು ಅವಲಂಬಿಸಿ ಉಳಿಯುತ್ತವೆ. ಅಥವಾ ಅಳಿಯುತ್ತವೆ. ಆಲೋಚನೆಗಳು, ಕಲ್ಪನೆಗಳು, ಕ್ರಿಯೆಗಿಳಿದು ವ್ಯಕ್ತಿಗೆ ಅನುಭವವಾಗಿ ದಕ್ಕುವ ಮೊದಲು ಅವು ಒಂದೆಡೆ ಸಂಗ್ರಹವಾಗಬೇಕು. ಹೀಗೆ ಸಂಗ್ರಹಿಸುವ ದಾಖಲೆಗಳು ಕಾಲ ಕಳೆದಂತೆ ಬರೆದಿಟ್ಟವರಿಗೆ ಉಚಿತ, ಅನುಚಿತ, ಬಾಲಿಷ ಎಂದು ಅನಿಸಬಹುದು. ಎಂದೋ ಯಾಕೋ ಹೊಳೆದ ವಿಚಾರಗಳು ದೂರ ಸಾಗಿ ಬಂದವರಿಗೇ ತಮ್ಮ ಅಂದಿನ ಸಂದರ್ಭದ ತಿಳುವಳಿಕೆ, ಆಲೋಚನೆ, ವ್ಯಕ್ತಿತ್ವಗಳನ್ನರಿಯಲು ಡೈರಿಯ ಟಿಪ್ಪಣಿಗಳು ಸಹಕಾರಿಯಾಗುತ್ತವೆ. ತಮ್ಮ ಬದುಕಿನ ಅಂದು ಇಂದು ಮುಂದುಗಳನ್ನು ಅರಿತು ಮುಂದಡಿಯಿಡಲು ನಾವೇ ಬರೆದುಕೊಂಡ ನಮ್ಮ ಮಾತುಗಳ ದಾಖಲೆಗಳು ಮಾರ್ಗದರ್ಶಿ ಆಗಬಹುದು.

ನಮ್ಮ ಬಾಲ್ಯದ ದಿನಗಳಲ್ಲಿ ಯಾರಿಂದಲಾದರೂ ಕೊಡುಗೆಯಾಗಿ ಹೊಸ ವರ್ಷದ ಆರಂಭದ ಜನವರಿ ತಿಂಗಳಲ್ಲಿ ನಮ್ಮ ಕೈಗೆ ಸಿಕ್ಕಿತೆಂದರೆ ಅದೊಂದು ಸಂಭ್ರಮ. ಡೈರಿಯ ಮೊದಲ ಪುಟದಲ್ಲಿ ನಮ್ಮ ಹೆಸರಿನಿಂದ ಪ್ರಾರಂಭವಾಗಿ ನಮ್ಮ ಮುಂದಿನ ಕನಸುಗಳು, ಯೋಜನೆಗಳು, ನಿರ್ಧಾರಗಳು, ಚುಟುಕು ಪದ್ಯಗಳು, ಚಿತ್ರಗಳು ಮತ್ತು ನೂರೆಂಟು

ಭಾವಕೋಶ ಸ್ಪಂದನಗಳು ಪುಟಪುಟಗಳಲ್ಲಿ ದಾಖಲಾಗಿದ್ದವು. ಇಂದಿನ ವೇಗದ ವಿದ್ಯುನ್ಮಾನ ಸಂವಹನದ ಕಾಲದಲ್ಲಿ ಅಂಗೈಯಲ್ಲಿನ ಮೊಬೈಲ್ ಒಳಗೇ ಜ್ಞಾನವು ಅದರೊಳಗೆ ನಮ್ಮ ವ್ಯಸನವೂ ಮಿಳಿತವಾಗಿದೆ. ಪೆನ್ನು ಹಿಡಿದು ಈಗಲೂ ಡೈರಿಯಲ್ಲೇ ನನ್ನೆಲ್ಲಾ ಬರಹಗಳನ್ನು ಬರೆಯುತ್ತೇನೆ. ಎಂದರೆ ಅನುಮಾನಿಸುವವರು ಹೆಜ್ಜೇ ಇಡುತ್ತಾರೆ. ನನ್ನ ಕೈ ಬರೆಯುವಾಗ ನನ್ನ ಮನಸ್ಸು ನಾಲ್ಕು ಜಿ ಗಿಂತಲೂ ಹೆಚ್ಚು ವೇಗವಾಗಿ, ಸಕ್ರಿಯವಾಗಿ ಕೆಲಸ ಮಾಡುತ್ತದೆ.

ಡೈರಿ ಬರಹದ ಸಂಸ್ಕೃತಿ ವಿದೇಶಿಯರಿಂದ ನಮಗೆ ಅಭ್ಯಾಸವಾಯಿತು ಎನ್ನುವವರಿದ್ದಾರೆ. ಕಳೆದ ಶತಮಾನದಲ್ಲಿ ಆದಿ ಅಂತ್ಯದ ಚರಿತ್ರೆಯನ್ನು ಗಮನಿಸಿ. ಸುಮಾರು ಅರ್ಧ ಶತಮಾನದಷ್ಟು ಅವಧಿ ನಮ್ಮ ದೇಶ ಬ್ರಿಟಿಷರ ಆಡಳಿತದ ಪ್ರಭಾವ ಗಾಢವಾಗಿ ಇದ್ದುದರಿಂದಲೇ ಅಂದಿನ ನಮ್ಮ ದೇಶದ ಪ್ರಜ್ಞಾವಂತರು, ರಾಜಕಾರಣಿಗಳು, ಶ್ರೀಮಂತ ದಾನಿಗಳು, ವಿಜ್ಞಾನಿಗಳು ಇತ್ಯಾದಿ ಮೇಲ್ತರದ ಗುಂಪಿನಿಂದ ಸಾಮಾನ್ಯ ವಿದ್ಯಾವಂತರವರೆಗೂ ಡೈರಿ ಬರೆಯುವ ಹವ್ಯಾಸ ರೂಢಿಸಿಕೊಂಡಿದ್ದರು. ಇವರಲ್ಲಿ ಹೆಚ್ಚಿನವರು ತಮ್ಮ ವ್ಯವಹಾರ, ಯೋಜನೆ, ಸಾಧನೆಗಳ ದಾಖಲೆಗಳಿಗೆ ಮಾತ್ರ ಡೈರಿಯನ್ನು ಉಪಯೋಗಿಸುತ್ತಾ ಇದ್ದರು. ಬುದ್ಧಿಜೀವಿಗಳು, ಹೋರಾಟಗಾರರು, ಕವಿ ಕಲಾವಿದರೂ, ಆಧ್ಯಾತ್ಮ ಚಿಂತಕರು ಇತರರಿಗಿಂತ ಭಿನ್ನವಾಗಿ ತಮ್ಮ ಕನಸು ಜಿಜ್ಞಾಸೆ, ತರ್ಕ ಇತ್ಯಾದಿಗಳನ್ನು ತಮ್ಮ ಡೈರಿಯಲ್ಲಿ ದಾಖಲಿಸಿರುವರು ಕಂಡುಬರುತ್ತದೆ.

ನಮ್ಮ ನಂಬಿಕೆಗಳು, ವಿರೋಧಗಳು ಏನೇ ಇರಲಿ, ಒಮ್ಮೊಮ್ಮೆ ಅವುಗಳನ್ನು ಅಕ್ಷರಗಳಲ್ಲಿ ದಾಖಲಿಸಿ ಒಂದು ಕಾಲ ಘಟ್ಟದ ನಂತರ ಅವಲೋಕಿಸಿದಾಗ ನಮ್ಮ ವಸ್ತುಸ್ಥಿತಿ, ಅರಿವಿನ ವಿಸ್ತಾರ, ಭ್ರಮೆಗಳು ಎಲ್ಲವೂ ಸ್ಪಷ್ಟವಾಗುತ್ತವೆ. ನಮ್ಮ ವ್ಯಕ್ತಿತ್ವದ ಪರಿವರ್ತನೆಗೆ ನಮ್ಮ ಅಭಿವ್ಯಕ್ತಿ ಸಂವಹನ ಕ್ರಮಗಳನ್ನು ಅರ್ಥ ಮಾಡಿಕೊಳ್ಳಲು ಉಪಯುಕ್ತವಾಗುತ್ತವೆ. ನಮ್ಮ ಮನಸ್ಸಿನ ಕಲ್ಪನೆಗೂ, ವಾಸ್ತವ ಜೀವನಕ್ಕೂ ಇರುವ ವ್ಯತ್ಯಾಸಗಳನ್ನು ವಿವೇಕದ ತಿಳುವಳಿಕೆ ನೆಲೆಯಲ್ಲಿ ಅರಿಯಲು ಡೈರಿಯ ಬರಹಗಳು ಮುಖ್ಯವಾಗುತ್ತದೆ. ನಮ್ಮ ಭೂತ ಕಾಲದಲ್ಲಿನ ನಮ್ಮೆಲ್ಲಾ ಗೊಂದಲಗಳು ಮುಂದೆ ಭವಿಷ್ಯದಲ್ಲಿ ನಮಗೆ ಕಾಡದಂತೆ ನಮ್ಮ ಮನಸ್ಸನ್ನು ನಮ್ಮ ವ್ಯಕ್ತಿತ್ವವನ್ನು ನಮಗೆ ತೋರುವ ಕನ್ನಡಿ ಡೈರಿ. ಡೈರಿ ಬರಹಗಳ ಪರಂಪರೆಯಲ್ಲಿ ಒಂದು ಕಾಲದ ರಾಜಕೀಯ ವ್ಯವಹಾರ, ಆಲೋಚನೆ, ವ್ಯಕ್ತಿತ್ವಗಳು ಇನ್ನೊಂದು ಕಾಲಕ್ಕೆ ಮಾರ್ಗದರ್ಶಿ ಆಗುವುದರಲ್ಲಿ ಸಂಶಯವೇ ಇಲ್ಲ.